ತಾರೀಖು 3ನೆ ಮೇ 1904.

ನಂ. ರೆ. 3283—ರೆ. ಫೈ. 54—1896, ಸ್ 1904ನೆ ಮಾರ್ಚಿ 16ನೆ ಮಾರ್ಕಂ ಜ. 4632ನೆ ನಂಬರ್ ಗವರ್ನಮೆಂಟಿನ ಇಸ್ತಿಹಾರ್ನಾಮೆಯಲ್ಲಿ ಹುಕುಂ ಮಾಡಲ್ಪಟ್ಟಿದ್ದ ವರ್ಗಾವರ್ಗಿಗಳ ದೆಸೆಯಿಂದ, ತುಮಕೂರು ಡಿಸ್ಟ್ರಿಕ್ಟ್ ವ ಟ್ರೆಜರಿಯ ಚಾರ್ಜನ್ನು ಇದರಡೀ ಕಂಡಂತೆ ಒಪ್ಪಿಸಿರುತ್ತೆ :—

ಚಾರ್ಜ್ ಒಪ್ಪಿಸಿದ ಆಫಿಸರು.	ಚಾರ್ಜ್ ವಹಿಸಿದ ಆಫಿಸರು.	ಚಾರ್ಜ್ ಒಪ್ಪಿಸಿದ ತಾರೀಖು.
1. ಡೆಪ್ಯೂಟಿ ಕಮಿಷನರಾದ ಮೆ|| ಕೆ. ಪಿ. ಪುಟ್ಟಣ್ಣ ಚೆಟ್ಟಿಯವರು.	ಅಸಿಸ್ಟೆಂಟ್ ಕಮಿಷನರಾದ ಮೆ|| ಪಿ. ಶ್ರೀನಿವಾಸರಾಯರು.	1904ನೆ ಮಾರ್ಚಿ 19ನೆ ತಾರೀಖು, ಪೂರ್ವಾಹ್ನದಲ್ಲಿ.
2. ಅಸಿಸ್ಟೆಂಟ್ ಕಮಿಷನರಾದ ಮೆ|| ಪಿ. ಶ್ರೀನಿವಾಸರಾಯರು.	ಅಫೀಷಿಯೇಟಿಂಗ್ ಡೆಪ್ಯೂಟಿ ಕಮಿಷನರಾದ ಮೆ|| ಕೆ. ಎಸ್. ದೊರಸ್ವಾಮಿ ಅಯ್ಯರ್ ಯವರು.	1904ನೆ ಮಾರ್ಚಿ 26ನೆ ತಾರೀಖು, ಮಧ್ಯಾಹ್ನೋತ್ತರ.

ತಾರೀಖು 3ನೆ ಮೇ 1904.

ನಂ. ರೆ. 3287—ಜು. ಫೈ. 86—1902-3, ಹಾಲಿ ಜಾರೀಲಿರತಕ್ಕ ಹುಕುಮಿಗೆ ಬದಲಾಗಿ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು, ಕಾಡು ಮೃಗಗಳನ್ನು ನಾಶಪಡಿಸಲಿಕ್ಕೋಸ್ಕರ ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲಿ ಒಂದೇವಿಧವಾಗಿ ಅಚರಿಸುವ ಬಗ್ಗೆ ಇನಾಮುಗಳ ಇದರಡೀ ಕಂಡ ದರಗಳು ವಿಧಿಸಿರುತ್ತಾರೆ :—

ಕಾಡು ಮೃಗಗಳ ಹೆಸರು.				ಪ್ರತಿ ಒಂದು ಮೃಗಕ್ಕೆ ಕೊಡತಕ್ಕ ಇನಾಮಿನ ದರ.
				ರೂ.
1. ಹುಲಿಗಳು	..	...	..	35
2. ಚಿರತೆಗಳು	...	...	..	20
3. ಕಾಡು ನಾಯಿಗಳು	...		..	10
4. ತೋಳಗಳು	....	...		10
5. ಕತ್ತೆಕಿರುಬಗಳು	..	...	...	5
6. ಕಾಡು ಜಕ್ಕುಗಳು	...	...	...	2

2. ಖಜಾನೆಗಳಲ್ಲಿ ಕಾಡುಮೃಗಗಳ ಚರ್ಮಗಳಿಗೋಸ್ಕರ ಕೊಡತಕ್ಕ ಕ್ರಯಗಳು.—ಹುಲಿ ಚರ್ಮಗಳಿಗೆ 6 ರೂಪಾಯಿಗಳಂತೆಯೂ, ಚಿರತೆಗಳ ಚರ್ಮಗಳಿಗೆ 2 ರೂಪಾಯಿಗಳಂತೆಯೂ ಜಾಸ್ತಿ ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಅಫೀಷಿಯೇಟಿಂಗ್ ಸೆಕ್ರಿಟೆರಿ.

ಫಾರೆಸ್ಟ್.

ಇಸ್ತಿಹಾರ್ನಾಮೆ.

ತಾರೀಖು 30ನೆ ಏಪ್ರೆಲ್ 1904.

ನಂ. 796—8962, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ತಿವಮೊಗ್ಗ ಡಿಸ್ಟ್ರಿಕ್ಟಿನ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕ್ವಾರ್ಟರ್‌ಮೇಟರಾದ ಮೆ || ಪಿ. ನರಸಿಂಹಮೂರ್ತಿರಾಯರಿಗೆ 1904ನೆ ಮಾರ್ಚಿ 24ರ ಲಾಗಾಯ್ತು 31ರ ತನಿಗೆ 8 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ಹುಕುಂ ಬಮೋಜೀಬ್,
ಎಂ. ಮುತ್ತಣ್ಣ,
ಫಾರೆಸ್ಟ್ ಇಲಾಖೆಯ ಗವರ್ನಮೆಂಟ್ ಅಫೀಷಿಯೇಟಿಂಗ್ ಸೆಕ್ರಿಟೆರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 28ನೆ ಏಪ್ರೆಲ್ 1904.

ನಂ. 435—2555, ಮೆ|| ಎಸ್. ಶ್ರೀನಿವಾಸ ಅಯ್ಯರ್, ಬಿ. ಎ., ಎ. ಸಿ. ಇ., ಯವರು ಮಾಹೆ ಮಜಕೂರು 27ನೆ ತಾರೀಖಿನಾರಭ್ಯ ಮಾಹೆಯಾನ 80 ರೂಪಾಯಿಗಳ ತಲಬಿನ ಮೇಲೆ ಹಂಗಾಮಿ ಮೂರನೆ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರಾಗಿ ಮೊಕರರ್ರಾಡಲ್ಪಟ್ಟು ಮೈಸೂರ ಪ್ಯಾಲೇಸ್ ಡಿವೀಜನಿಗೆ ನೇಮಿಸಲ್ಪಟ್ಟಿರುತ್ತಾರೆ.

ತಾರೀಖು 30ನೆ ಏಪ್ರೆಲ್ 1904.

ನಂ. 58—414, ತುಮಕೂರ ಡಿವೀಜನಿನ ಅಫೀಷಿಯೇಟಿಂಗ್ ಎಗ್ಜಿಕ್ಯೂಟಿವ್ ಇಂಜನಿಯರಾದ ಮೆ|| ಸಿ. ವಾಸುದೇವಾಯರಿಗೆ ಬರುವ ತಿಂಗಳಿನ 2ನೆ ತಾರೀಖಿನ ಲಾಗಾಯ್ತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 4ನೆ ಮೇ 1904.

ನಂ. 447—2620, ಕೋಲಾರ ಡಿವೀಜನಿಗೆ ಸೇರಿದ ಅಸಿಸ್ಟೆಂಟ್ ಇಂಜನಿಯರ್ ಮೆ|| ವಿ. ಆಯ್ಯಾಸ್ವಾಮಿ ಅಯ್ಯರ್, ಬಿ. ಎ., ಬಿ. ಸಿ. ಇ., ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಮೆಕ್‌ಹರ್ಟ್,
ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರು ಗವರ್ನ್‌ಮೆಂಟ್ ಸೆಕ್ರೆಟರಿ.

ಮುಜರೈ.

ಇನ್ತಿಹಾರ್ನಾಮೆ.

ತಾರೀಖು 26ನೆ ಏಪ್ರೆಲ್ 1904, ಕ್ಯಾಂಪ್ ಯಳಂದೂರು.

ನಂ. 3358, ಇದರಿಂದ ಕಂಡ ದೊಡ್ಡ ಮನುಷ್ಯರು ಮೈಸೂರಲ್ಲಿರುವ ನಂಜರಾಜ ಬಹದ್ದೂರು ಛತ್ರದ ಆಡಳಿತಕ್ಕೋಸ್ಕರ ಉಂಟಾದ ಕಮಿಟಿಯ ಮೆಂಬರುಗಳಾಗಿ ನೊಕರರ್ಕಾಡಲ್ಪಟ್ಟಿರುತ್ತಾರೆ:—

(I) ಮೈಸೂರು ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರವರು .. ಪ್ರೆಸಿಡೆಂಟರು.
(II) ಮೈಸೂರು ಡಿವೀಜನಿನ ತತ್ಕಾಲದ ಎಗ್ಜಿಕ್ಯೂಟಿವ್ ಇಂಜನಿಯರು .. ಸೆಕ್ರೆಟರಿಯವರು.
(III) ಮೆ|| ಪುಟ್ಟಯ್ಯಾಜಿ ಅರಸಿನವರು .. ..
(IV) ಕೆಲಸದಿಂದ ನಿವೃತ್ತರಾದ ಅಸಿಸ್ಟೆಂಟ್ ಕಮಿಷನರ್ ಮೆ|| ಕೃಷ್ಣಮೂರ್ತಿರಾಯರು .. } ಮೆಂಬರುಗಳು.
(V) ಮೆ|| ಗುರಿಕಾರ ಬಸವಲಿಂಗಯ್ಯನವರು .. ...

ಹುಕುಂ ಬಮೋಜೀಬ್,
ಎಂ. ಶಾಮರಾವ್,
ಅಫೀಷಿಯೇಟಿಂಗ್ ಸೆಕ್ರೆಟರಿ.